ಗೊತ್ತಿಲ್ಲ. ಇವೊತ್ತು ರೆವಿನ್ಯೂ ಅಧಿಕಾರಿಗಳಿಗೆ ಮೊದಲು ಇದ್ದಷ್ಟು ಕೆಲಸ ಇಲ್ಲ. ಎಲ್ಲಾ ಕೆಲಸವೂ ಮಂಡಲ ಪಂಚಾಯ್ತಿಗೆ ಹೋಗಿದೆ, ಇದು ರೈತರಿಗೆ ಅನುಕೂಲವಾಗುವಂಥ ಕೆಲಸ. ಮ್ಯುಟೇಷನ್ ಕೂಡ ಕ್ಲಿಯರಾಗುತ್ತದೆ. ರೆವಿನ್ಯೂ ಅಧಿಕಾರಿಗಳಿಗೆ ಬಿಗಿಯಾಗಿ ಡೈರೆಕ್ಷನ್ ಕೊಟ್ಟು ಎರಡರೆಡು ಹೋಬಳಿಗೆ ಕೊಡುವಂತೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇಡೀ ರಾಜ್ಯಕ್ಕೆ ಒಂದೇ ಸಲಕ್ಕೆ ಕೊಡಬೇಕೆನ್ನುವ ಇಚ್ಛೆ ನವಂಗಿದೆ. ಬರಪೀಡಿತ ಮತ್ತಿತರ ಕೆಲಸಗಳಿಂದ ಸಮಯ ಹಿಡಿಯುತ್ತಿದೆ. ಪ್ರತಿಯೊಬ್ಬ ರೈತರ ವಿಚಾರದಲ್ಲಿಯೂ ಸರಿಯಾದ ಮಾಹಿತಿಯನ್ನು ಬರೆಯಬೇಕಾಗುತ್ತದೆ. ತಪ್ಪು ಮಾಹಿತಿ ಬರೆದರೆ ಅನಾನುಕೂಲವಾಗುತ್ತದೆ. ಆದಷ್ಟು ಬೇಗ ಪಾಸು ಪುಸ್ತಕಗಳನ್ನು ಕೊಡಿಸಲಾಗುವುದು. ಹಾಗೂ ತಮ್ಮ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಗುಂಡೂರಾಯರ ಕಾಲದಲ್ಲಿ ಫೈಲಂ ಕ್ಲಿಯರೆನ್ಸ್ ಕಾರ್ಯಕ್ರಮ ಹಾಕಿಕೊಂಡಿದ್ದರಂ. ಅದೇರೀತಿ ಪ್ರತಿ ತಾಲ್ಲೂಕಿನಲ್ಲಿಯೂ ಎರಡೆರಡು ಹೋಬಳಿಗಳಿಗೆ ಇಡೀ ರೆವಿನ್ಯೂ ಅಧಿಕಾರಿಗಳನ್ನು ಕಾನ್‌ಸೆಂಟ್ರೇಟ್ ಮಾಡಿ ಬರೆಸಿಕೊಟ್ಟರೆ ರೈತರಿಗೆ ಅನುಕೂಲ ವಾಗುತ್ತದೆ. ಮಾನ್ಯ ಬೊಮ್ಮಾಯಿಯವರು ಏತಕ್ಕೆ ಅಂಜುತ್ತಾರೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಂಜತಕ್ಕ ಪ್ರಶ್ನೆ ಇಲ್ಲ. ಇದನ್ನು ಪ್ರಾಕ್ಟಿಕಲ್ ಆಗಿ ನೋಡಬೇಕಾಗುತ್ತದೆ. ಎಷ್ಟು ಸಾಧ್ಯವಾಗುತ್ತದೋ ಅಷ್ಟು ಕೊಡಿ ಎಂದು ಆದೇಶ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ.....

ಅಧ್ಯಕ್ಷರು.—ಅಯಿತಲ್ಲ, ತಾವು ವಕೀಲರಿದ್ದು, ಹೀಗೆ ಮಾಡಿದರೆ ಹೀಗೆ ?

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಶೀಘ್ರವಾಗಿ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಶೀಘ್ರ ಅಂದರೆ, ಒಂದು ವರ್ಷವಾಗಬಹುದು. ಆರು ತಿಂಗಳಾಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗೆ, ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ. ನೀವು ಹೇಳಿದ ಹಾಗೆ ಆದೇಶ ಕೊಡುತ್ತೇನೆ. ಒಂದು ವರ್ಷದಲ್ಲಿ ಎಷ್ಟು ಆಗುತ್ತದೆಯೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡಲಾಗುವುದು.

ಕೊಲ್ಲೂರಿನಲ್ಲಿ ಅಕ್ರಮಣದಾರರಿಗೆ ಭೂಮಿ ನೀಡುವ ವಿಚಾರ.

೨೨೨. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರಿನಲ್ಲಿ ಅನೇಕ ವರ್ಷಗಳಿಂದ ಭೂಮಿ ಅಕ್ರಮಣ ಮಾಡಿ ಕೊಂಡ ಸ್ಥಳೀಯರಿಗೆ ಭೂಮಿ ನೀಡಲು ಬಾಕಿಯಿರುವ ಅರ್ಜಿಗಳೆಷ್ಟು ? ಹಾಗೂ ಎಷ್ಟು ವರ್ಷ ಗಳಿಂದ ಬಾಕಿಯಿವೆ.

(ಆ) ಸ್ಥಳೀಯರಿಂದ ಅರ್ಜಿಗಳು ಬಾಕಿಯಿದ್ದರೂ ಹೊರಗಿನಿಂದ ಬಂದವರಿ ಗೆಭೂಮಿ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಎಷ್ಟು ಜನರಿಗೆ ಇದುವರೆವಿಗೂ ಭೂಮಿ ನೀಡಲಾಗಿದೆ. ಹಾಗಿದ್ದಲ್ಲಿ ಹೊರಗಿನಿಂದ ಬಂದವರಿಗೆ ಅದ್ಯತೆ ನೀಡಲು ಕಾರಣವೇನು ?

(ಈ) ಬಾಕಿಯಿರುವ ಅರ್ಜಿಗಳನ್ನು ಪರಿಶೀಲಿಸಿ ಯಾವಾಗ ಭೂಮಿ ನೀಡಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

(ಅ) ೫೬ ಅರ್ಜಿಗಳು ಬಾಕಿಯಿವೆ. ಬಾಕಿಯಿರುವ ಅವಧಿಯ ವಿವರವನ್ನು ಈ ಕೆಳಗೆ ನವ ರೂದಿಸಿದೆ.—

೧೯೭೯–೮೦	...	೧
೧೯೮೨–೮೩	...	೧೭
೧೯೮೩–೮೪	...	೩
೧೯೮೫–೮೬	...	೧೭
೧೯೮೬–೮೭	...	೧೯
ಒಟ್ಟು		೫೬

(ಆ) ಅಂತಹ ಪ್ರಕರಣಗಳು ಇರುವುದಿಲ್ಲ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಅರಣ್ಯ ಜಮೀನಿನಲ್ಲಿಯ ಅತಿಕ್ರಮಣದ ಸಕ್ರಮಣದ ಬಗ್ಗೆ ಆಕ್ರಮಿತ ಭೂಮಿಯನ್ನು ಅರಣ್ಯ ಇಲಾಖೆಯವರು ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ ನಂತರ ಪರಿಗಣಿಸಲಾಗುವುದು. ಕಂದಾಯ ಇಲಾಖೆಯಂ ಜಮೀನಿನ ಅತಿಕ್ರಮಗಳಲ್ಲಿ ಯಾವುದೇ ಪ್ರಕರಣವು ಜಾರಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಅರ್ಹತೆಯನ್ನು ಪಡೆಯದೆ ಇರುವುದರಿಂದ ಸಕ್ರಮಣಗೊಳಿಸಲಾಗಿರುವುದಿಲ್ಲ.

(ಶ್ರೀ ಜಿ. ಎಸ್. ಆಚಾರ್ ಅವರ ಪರವಾಗಿ ಶ್ರೀ ದೊಡ್ಡಮೇಟಿಯವರು ಪ್ರಶ್ನೆ ಕೇಳಿದರು)

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ —ಮಾನ್ಯ ಅಧ್ಯಕ್ಷರೆ, ಇಂಥ ಪ್ರಕರಣಗಳು ಇರುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಅಲ್ಲಿ ಈಗಾಗಲೇ ಮಲೆಯಾಳಿಗಳು, ಇತರರು ಬಂದು ಸಾಗುವಳಿ ಮಾಡುತ್ತಿದ್ದು ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಇದರ ಬಗ್ಗೆ ತನಿಖೆ ಮಾಡುತ್ತೀರಾ ? ಅಲ್ಲಿ ಅರಣ್ಯ ಜಮೀನನ್ನು ಅತಿಕ್ರಮಣ ಮಾಡಿದ್ದಾರೆ. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹೋಗಿದ್ದ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಿದ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಕಂದಾಯ ಇಲಾಖೆಯ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಸಂಬಂಧಪಟ್ಟ ಮಸೂದೆ ಈಗಾಗಲೇ ಈ ಮನೆಯ ಮುಂದೆ ಇದೆ.

ಮುಂದೂಡಲಾದ ಪ್ರಶ್ನೆಗಳು

ಅಧ್ಯಕ್ಷರು.—ಮುಂದೂಡಲಾದ ಪ್ರಶ್ನೆಗಳು.

ಶ್ರೀ ಎ. ಕೃಷ್ಣಪ್ಪ.—
ಶ್ರೀ ಕೆ ಕಾಶಪ್ಪ.—
ಶ್ರೀ ಜಿ. ಎಸ್. ಶಿವನಂಜಪ್ಪ.—
} ಇವರ ಪ್ರಶ್ನೆಗಳಿಗೆ ಮಂತ್ರಿಗಳು ಕಾಲಾವಕಾಶ ಕೋರಿದ್ದಾರೆ.

ಈಗ ಶ್ರೀ ರಾಜುಗೌಡ ಅವರು ತಮ್ಮ ಪ್ರಶ್ನೆ ಕೇಳುವುದು.